

# ಹೊಸ ವಿನ್ಯಾಸದ ಬುಗುಡಿ ಫ್ಯಾಷನ್ ಲೋಕಕ್ಕೆ ದಾಂಗುಡಿ

**ಕಿವಿಯೋಲೆಯಲ್ಲಿ ಫ್ಯಾಷನಬಲ್ ಆಗಿರುವಂಥವು ಹೊಸದೇನಲ್ಲ. ಕಿವಿಯೋಲೆಗಿಂತ ಮೇಲೆ ಧರಿಸುವ ಬುಗುಡಿ ಕಿವಿಯೋಲೆ ಹೊಸ ರೂಪ, ವಿನ್ಯಾಸದೊಂದಿಗೆ ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಟ್ಟಿದೆ. ಹೂವಿನಾಕಾರದ, ಎಲೆಯಾಕಾರದ ಬುಗುಡಿಗಳು ಕಿವಿಗಳ ಮೇಲೆ ಹೊಳೆಹೊಳೆಯುತ್ತ ಅಂದ ಹೆಚ್ಚಿಸುತ್ತಿವೆ.**

■ ಆಶಾ ಎಸ್. ಕುಲಕರ್ಣಿ

ಕಿವಿಗಳ ಅಂದ ಹೆಚ್ಚಿಸಲು ಫ್ಯಾಷನಬಲ್ ಕಿವಿಯೋಲೆಗಳು ಬೇಕು. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬುಗುಡಿ ಕಿವಿಯೋಲೆಗಳು ಬಂದಿದ್ದು ಫ್ಯಾಷನ್‌ಪ್ರಿಯರ ಮನತಣಿಸುತ್ತಿವೆ. ಹೂವಿನಾಕಾರ, ಎಲೆಯಾಕಾರದಷ್ಟೇ ಅಲ್ಲ, ವಿವಿಧ ವಿನ್ಯಾಸಗಳ ಬುಗುಡಿಗಳು ಮುತ್ತು, ಹರಳಿನ ರೂಪದಲ್ಲಿ ಹೆಂಗಳೆಯರ ಕಿವಿಗಳಲ್ಲಿ ಕಂಗೊಳಿಸುತ್ತಿವೆ.

ಹಾಗೆ ನೋಡಿದರೆ ಬುಗುಡಿ ಫ್ಯಾಷನ್ ಇಂದು ನಿನ್ನೆಯದಲ್ಲ. ಅಜ್ಜಿಯರ ಕಾಲದಲ್ಲಿ ಕಿವಿಯೋಲೆ ಕಿವಿಗಳ ಕೆಳಭಾಗದಲ್ಲಿ ಇದ್ದರೆ ಕಿವಿಯ ಮೇಲ್ಭಾಗದಲ್ಲಿ ಬುಗುಡಿಗಳದ್ದೇ ಕಾರುಬಾರು. ಇದಕ್ಕಾಗಿಯೇ ಈಗ ವಿವಿಧ ರೀತಿಯ ಬುಗುಡಿ ಕಿವಿಯೋಲೆಗಳು ಬಂದಿದ್ದು ಫ್ಯಾಷನ್‌ಪ್ರಿಯರ ಮನತಣಿಸುತ್ತಿವೆ. ಕಿವಿಯೋಲೆ, ಕಾಲ್ಗೆಜ್ಜೆ, ಬಿಂದಿ, ನೇಲ್‌ಪಾಲಿಷ್, ಉಡುಪು ಎಲ್ಲವನ್ನೂ ನೋಡಿ ಮ್ಯಾಚ್ ಮಾಡಿಕೊಂಡೇ ಈ ಬುಗುಡಿ ಧರಿಸಬಹುದು. ಇಂದಿನ ಯುವತಿಯರ ಅಭಿರುಚಿಗೆ ತಕ್ಕಂತೆ ಇದೀಗ ಬಂದಿರುವ ಹೊಸ ಬಗೆಯ ಬುಗುಡಿ ಕಿವಿಯೋಲೆಗಳು ಇವರ ಹಾಟ್ ಫೇವರೆಟ್ ಲಿಸ್ಟ್‌ಗೆ ಸೇರಿಬಿಟ್ಟಿವೆ.

ಕಿವಿಯೋಲೆ ಸೌಂದರ್ಯವನ್ನು ಹೆಚ್ಚಿಸುತ್ತದೆ. ನಿಮ್ಮ ಮುಖಕ್ಕೆ ಸರಿ ಹೊಂದುವ ಓಲೆಗಳನ್ನು ಮಾತ್ರ ಧರಿಸಬೇಕು. ಇಷ್ಟ ಬಂದ ಕಿವಿಯೋಲೆಗಳನ್ನೆಲ್ಲ ಕಿವಿಗೇರಿಸಬಾರದು, ಅದು ನಿಮ್ಮ ಮುಖದ ಅಂದವನ್ನು ಕೆಡಿಸುವ ಸಾಧ್ಯತೆಯೂ ಉಂಟು. ಇತ್ತೀಚೆಗೆ ಫ್ಯಾಷನ್ ಪ್ರಿಯರಾದ ಮಹಿಳೆಯರಿಗೆ ಒಂದು ಕಿವಿಯೋಲೆ ಧರಿಸಿದರೆ ಸಾಕಾಗುತ್ತಿಲ್ಲ. ಬದಲಾಗಿ ಏಳೆಂಟು ಕಡೆ ಕಿವಿ ಚುಚ್ಚಿಸಿಕೊಂಡು ವಿವಿಧ ವಿನ್ಯಾಸದ ಕಿವಿಯೋಲೆ ಧರಿಸುತ್ತಿದ್ದಾರೆ. ಅದೇ ಇಂದಿನ ಫ್ಯಾಷನ್ ಟ್ರೆಂಡ್ ಎನಿಸಿದೆ. ಆಧುನಿಕ ಮಹಿಳೆಯರು ಸೀಸನ್‌ಗೆ ತಕ್ಕಂತೆ ಅಪ್‌ಡೇಟ್ ಆಗಲು ಬಯಸುತ್ತಿದ್ದಾರೆ. ಅವರ ಅಭಿರುಚಿಗೆ ತಕ್ಕಂತೆ ಫ್ಯಾಷನಿಸ್ಟ್‌ಗಳು ಕೂಡ ವಿಧವಿಧದ ಕಿವಿಯೋಲೆಗಳನ್ನು ಮಾರುಕಟ್ಟೆಗೆ ತಂದಿದ್ದಾರೆ.

## ಮತ್ತಷ್ಟು ಆಪ್ತ

ಹಿಂದೆಲ್ಲಾ ಸಾಂಪ್ರದಾಯಿಕ ಆಭರಣಗಳ ಸಾಲಿನಲ್ಲಿದ್ದ ಬುಗುಡಿ ಇದೀಗ ಒಂದಷ್ಟು ಹೊಸ ವಿನ್ಯಾಸದೊಂದಿಗೆ ಹೆಣ್ಣು ಮಕ್ಕಳಿಗೆ ಆಪ್ತವಾಗುತ್ತಿದೆ. ಬುಗುಡಿ ಎಂದರೆ ವಯಸ್ಸಾದವರು, ಅತ್ಯಂತ ಶ್ರೀಮಂತ ಮನೆತನದವರು, ಹಾಗೇ ಮದುವೆ ಸಮಾರಂಭಗಳಲ್ಲಿ ಮಾತ್ರ ಧರಿಸುತ್ತಿದ್ದ ಸಾಂಪ್ರದಾಯಿಕ ಆಭರಣ ಎಂದಾಗಿತ್ತು. ಅಲ್ಲದೆ ಗ್ರಾಮೀಣ ಮಹಿಳೆಯರು ಕೂಡ ಈವರೆಗೂ ಬುಗುಡಿ ಧರಿಸುತ್ತಿರುವುದನ್ನು ನಾವು ನೋಡುತ್ತಾ ಬಂದಿದ್ದೇವೆ. ಸ್ವಲ್ಪ ದಿನಗಳ ಹಿಂದೆ ಹಳೆಯ ಕಾಲದ ಆಭರಣ ಎಂದು ಮೂಗು ಮುರಿಯುತ್ತಿದ್ದ